

ಕರ್ನಾಟಕ ವಿದ್ಯಾವರ್ಧಕ ಸಂಘ

ವಿಶ್ವವಿದ್ಯಾಲಯದ ನಂಟು ಹೆಚ್ಚಾನುಹೆಚ್ಚು ಮಂದಿಗ ಇದ್ದೇ ಇರ್ತೇತಿ.

ಭೀಮಸೇನ ಜೋಶಿಯೋರು, ಗಂಗೂಬಾಯಿ ಹಾನಗಲ್‌ನಂತವರಿಂದ ಸಂಗೀತಕಾಶಿ ಅಂತ್ಲೂ ಪ್ರಸಿದ್ಧಿ ಆಗೇತಿ ನೋಡ್ರಿ. ಪೆನ್ಷನ್‌ಮಂದಿ ಸ್ವರ್ಗ ಅಂತ್ಲೂ ಹೇಳ್ತರ್ರೀ. ಗದ್ಲ ಇಲ್ಲ, ಗಲಾಟಿ ಇಲ್ಲ, ಊರು ಉಸಾಬರಿ ಮಾಡಂಗಿಲ್ಲ, ಕೆಲವೊಂದು ಏರಿಯಾದಾಗ ಮಧ್ಯಾಹ್ನ ಕಡೀಗ ಹೋದ್ರ, ಮಂದಿ ಅಡ್ಡಾಡೂದು ಸೈತ ಕಣ್ಣಿಗ ಬೀಳಾಂಗಿಲ್ಲ.

‘ರೊಟ್ಟಿ ತಿಂದ ಮಂದಿ ಗಟ್ಟಿ’ ಅನ್ನೂದು ಖರೇ ಐತಿ. ಉತ್ತರ ಕರ್ನಾಟಕದ ಮಂದಿ ತಾಕತ್ತು ಇರೂದಾ ರೊಟ್ಟ್ಯಾಗ ನೋಡ್ರಿ. ಮಂಜಮುಂಜೇಲೇ ಎಲ್ಲರ ಮನ್ಯಾಗೂ ದಬದಬದಬ ರೊಟ್ಟಿ ಬಡಿಯೂ ಸಪ್ಪಳಾ ಕೇಳೇಕೇಳ್ತೇತಿ. ರೊಟ್ಟಿ ಬಡೀಲಿಕ್ಕ ಆಗಾಂಗಿಲ್ಲ ಅಂದ್ರ ತಿನ್ನೂಕಂತೂ ಬೇಕಲ್ಲ! ಹಂಗಾಗಿ ಮನಿ ಮನಿಗ ಬಂದ ರೊಟ್ಟಿ ಬಡಿದು ಕೊಡೂ ಹೆಣ್ಮಕ್ಳು, ರೊಟ್ಟಿ ಬಡಿದು ಮಾರೂ ಮಂದಿ ಹೀಂಗ ರೊಟ್ಟಿಯಿಂದ್ಲೇ ಜೀವ್ನಾ ಕಟ್ಕೊಂಡೋರು ರಗಡ ಮಂದಿ ಅದಾರ. ನಮ್ ಧಾರ್ವಾಡ ಪೇಢೆ ಎಷ್ಟು ಫೇಮಸ್ ಅಂದ್ರ, ಅದರ್ ಬಗ್ಗಿ ದೇಶವಿದೇಶದಾಗೂ ಹೆಸರು ಮಾಡೇತಿ. ಏನಾದ್ರೂ ಖುಷಿ ಸುದ್ದೀ ಕಿವಿಗ ಬಿತ್ತೂ ಅಂದ್ರ ಸಾಕು, ‘ಪೇಢೆ ಯಾವಾಗ ಹಂಚ್ತೀರಿ’ ಅಂತ್ಲೇ ಚಾಷ್ಟೀ ಮಾಡೂದು. ಗಿರ್ಮಿಟ್ ಸೈತ ಅಷ್ಟಾ ಪಸಂದ ಮಾಡ್ತರ್ರೀಪಾ. ಬಸಪ್ಪನ ಖಾನಾವಳಿನಾಗ ರೊಟ್ಟಿ ಊಟ ಮಸ್ತ್ ಇರ್ತೇತಿ, ಅಲ್ಲಿಗೊಮ್ಮೆ ಮುದ್ದಾಂ ಭೇಟಿ ಕೊಡ್ಬೇಕ.

ಧಾರ್ವಾಡ ಅಂದ್ಮ್ಯಾಗ ಎಮ್ಮೀ ಬಗ್ಗೆ ಹೇಳದಿದ್ರೆ ಹ್ಯಾಂಗ ಹೇಳ್ರೀ. ಮುಂಜೇಲೊಮ್ಮಿ, ಸಂಜೀಗೊಮ್ಮಿ ಯಾವ ರಸ್ತಾದ ಮ್ಯಾಗ ಹ್ವಾದ್ರೂ ಎಮ್ಮಿ ಹಿಂಡಾ ಹಿಂಡು. ರಾಸ್ತಾ ರೋಖೋ ಚಳುವಳಿ ಮಾಡೂ ಹಂಗ, ರಸ್ತೆ ಮ್ಯಾಗ ಎಲ್ಲೆಂದ್ರಲ್ಲಿ, ಕೊಳ್ಳಾಗಿನ ಗಂಟೀ ಸದ್ದು ಮಾಡ್ಕೋತ ಅಡ್ಡಾ, ದಿಡ್ಡೀ ಹೋಗ್ತಿರ್ತಾವ. ಒಮ್ಮೊಮ್ಮಿ ಕತ್ಲಾಗ ನಡೂ ದಾರ್‍ಯಾಗ ಮೆಲುಕಾಡ್ಕೋತ ಕೂತುಬಿಡ್ತಾವ. ಆ ರಸ್ತಿ ಮ್ಯಾಗ ಅಡ್ಯಾಡೂ ಗಾಡಿಗಳೆಲ್ಲ ‘ಪಾಂವ್ ಪಾಂವ್’ ಒದರ್ಲಿಕ್ ಸುರು ಮಾಡಿದ್ರೂ, ಎಮ್ಮಿಗಳೇನು ತಲಿಕೆಡಿಸ್ಕೊಳ್ಳಾಂಗಿಲ್ಲ ಬಿಡ್ರೀ. ಯಾರಾದ್ರು ಒಂದು ಕೋಲು ತಂದು ಹಿಂಬದಿಗೊಂದು ಪೆಟ್ಟು ಕೊಟ್ರ ಅಥವಾ ತಂಬಿಗಿ ನೀರು ತಂದು ಎಜ್ಜಿದ್ರ ಸಾವಕಾಶ ಏಳಲೋ ಬ್ಯಾಡೋ ಅಂತ, ಮಾರಿ ಸೊಟ್ ಮಾಡ್ಕೊಂಡಾ ಎದ್ದು ಸೈಡ್ ಸರಿತಾವ್ರೀ. ಎಮ್ಮಿಕೇರಿ ಅಂತ ಎಮ್ಮಿ ಹೆಸರಿಲೇ ಒಂದು ಕೇರಿನೂ ಐತಿ ನೋಡ್ರಿ. ಮಹಿಷಿ ನಗರ ಅಂತ ಒಂದೀಟು ಸ್ಟ್ಯಾಂಡರ್ಡ್ ಹೆಸರಿನ ಏರಿಯಾನೂ ಐತ್ರೀಪಾ.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– **editorsu@sudha.co.in**



ತುಪ್ಪದ ಅವಲಕ್ಕಿ, ಮಿರ್ಚಿ ಭಜಿಗೆ ಫೇಮಸ್ ಎಲ್‌ಇಎ ಕ್ಯಾಂಟೀನ್

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಕಳೆದ ವಾರದ ‘ಚೆನ್ನುಡಿ’
‘ಎಂಥ ಸಾವೋ ಮಾರಾಯ್ರೆ ಒಂದೂ ಗೊತ್ತಿಲ್ಲ...’ ಕೇಳಿ...

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಧಾರ್ವಾಡ ಕಸೂತಿ ಸೀರಿ ಉಟ್ಕೊಂಡಿರೂ ಹೆಣ್ಮಕ್ಳನ್ನ ನೋಡ್ಬೇಕು ನೀವು, ದೃಷ್ಟಿ ತಾಕೂಹಂಗ ಇತರ್ರೀ.

‘ಧಾರ್ವಾಡ ಮಳೀ ನಂಬಬಾರದು’ ಅನ್ನೂದು ಖರೇ ಐತಿ. ಯಾವಾಗ ಬರ್ತದೋ, ಯಾವಾಗ ಬಿಡ್ತದೋ ಒಂದೂ ಗೊತ್ತಾಗಂಗಿಲ್ಲ. ಮಳೀಗಾಲ ಮುಗಿಯೂಮಟ ಛತ್ರಿಸಂಗ ಬಿಡಂಗಿಲ್ಲ. ಅದಕ್ಕಾ ಊರು ತುಂಬ ಕೆರಿಗಳು ಅನ್ನಿಸ್ತದ. ಮುಂಚಿ ಬಾಳ ಇದ್ವಂತ್ರೀಪಾ, ಈಗ ಅಲ್ಲೊಂದು, ಇಲ್ಲೊಂದು, ಕೆಲಗೇರಿ, ಸಾಧನಕೇರಿ, ತೋಳನಕೇರಿ, ನುಗ್ಗಿಕೇರಿ ಅಂತ ಕೆಲವೊಂದು ಹೌದು ಹೌದು ಅನ್ನೂ ಮಟ್ಟಿಗ ಶೋಪೀಸ್‌ಗತ್ಲೇ ಉಳ್ಕೊಂಡಾವ. ಧಾರ್ವಾಡದಾಗ ಹಳೀಮನಿಗಳನ್ನ ನೋಡೂದೇ ಚಂದ. ದೊಡ್ ದೊಡ್ ಮನಿಗೋಳ, ಮನೀ ಸುತ್ಲೂ ಕಾಡ್ನಾಗ ಬೆಳ್ಸಿದಂಗ ಮಾವು, ಹಲಸು, ಚಿಕ್ಕೂ, ತಂಗು, ಪೇರೂ ಇನ್ನೂ ಸಾಕಷ್ಟು ಬ್ಯಾರೆ ಬ್ಯಾರೆ ಮರಗೋಳು, ಹೂವಿನ ಗಿಡಗೋಳು, ಒಂದು ಕಡಿ ಬಾವಿ, ನಿಂತ ನೋಡ್ಬೇಕ ಅನ್ನಿಸ್ತದ.

ಧಾರ್ವಾಡನ ಅಕ್ಷರಗಳಲ್ಲೇ ಒಂದು ರೌಂಡ್ ಹಾಕ್ಸಿದ್ನೋ ಇಲ್ವೋ! ಓದಿದೋರೆಲ್ಲ ಒಂದು ಕಪ್ ಚಾ ಕೊಡಿಸ್ಬೇಕಪ್ಪ, ಜೊತೀಗೆ ಗಿರ್ಮಿಟ್ಟು ಕೊಡಿಸಿದ್ರ ಮತ್ತಷ್ಟು ಚೊಲೋ... ಹೌದಿಲ್ಲೋ?